ಅಧ್ಯಕ್ಷರು.—ಬೇರೆ ಪ್ರಶ್ನೆ ಕರೆದಿದ್ದೇನೆ. ಆದ್ದರಿಂದ ಮಾನ್ಯ ಸದಸ್ಯರಿಗೆ ಉಪ ಪ್ರಶ್ನೆ ಕೇಳಲು ಪರ್ಮಿಶನ್ ಕೊಡುವುದಕ್ಕಾಗುವುದಿಲ್ಲ. ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಡಿಮ್ಯಾಂಡ್ ಬರುತ್ತದೆ. ಆವಾಗ ಮಾತನಾಡಬಹುದು ದಯಮಾಡಿ ತಾವು ಈಗ ಕೂತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ಹಾಗಾದರೆ ಇದರಮೇಲೆ ಒಂದು ಮೋಷನ್ ಕಳುಹಿಸುತ್ತೇನೆ. ಅದರ ಮೇಲೆ ಅರ್ಧಗಂಟೆ ಚರ್ಚೆ ಮಾಡುವುದಕ್ಕೆ ಪರ್ಮಿಷನ್ ಕೊಡುತ್ತೀರಾ?

ಅಧ್ಯಕ್ಷರು.—ಮೋಷನ್ ಕೊಟ್ಟರೆ ಅದನ್ನು ಕನ್ಸಿಡರ್ ಮಾಡುತ್ತೇನೆ.

Selection of Fisherman as a Trainee

923. **Sri M. M. JALISATGI** (Bhatkal).—

Will the Minister for Fisheries and Ports be pleased to state :—

(*a*) whether a fisherman by profession is eligible for selection as a trainee;

(*b*) whether a number of applicants from Kumta, Honnavar and Bhatkal Taluks were not selected as trainees on the ground that they are not fishermen by caste?

Sri H. C. LINGA REDDY (Minister of State for Fisheries and Ports).—

(*a*) Yes.

(*b*) No.

ಶ್ರೀ ಎಂ. ಎಂ. ಜಾಲಸಟ್ಗಿ.—ಸ್ವಾಮಿ, ಜಾತಿಯಿಂದ ಬೆಸ್ತರವಲ್ಲವೆಂಬ ಆಧಾರದಮೇಲೆ ಅನೇಕ ಅರ್ಜಿಗಳನ್ನು ತಿರಸ್ಕರಿಸಿದ್ದಾರೆ. ಅಂಥಾದ್ದನ್ನು ಸರ್ಕಾರದ ನಜರಿಗೆ ತಂದರೆ, ಸೆಲೆಕ್ಷನ್ ಸಮಿತಿಯಲ್ಲಿರುವ ಅಧಿಕಾರ ವರ್ಗದವರಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ಮತ್ತು ಅಧಿಕಾರೇತರರ ಮೆಂಬರ್‌ಷಿಪ್ಪನ್ನು ರದ್ದು ಮಾಡುತ್ತೀರಾ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮೊದಲು ಏನು ಹೆಚ್ಚು ಕಡಿಮೆ ಆಗಿದೆ ಎಂದು ಸರ್ಕಾರದ ಗಮನಕ್ಕೆ ತಂದರೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ, (ಅ) ಪ್ರಶ್ನೆಗೆ ಜಾತಿಯಲ್ಲಿ ಬೆಸ್ತರಲ್ಲದವರನ್ನು ತೆಗೆದುಕೊಂಡಿಲ್ಲವೇ ಎಂದು ಕೇಳಿದ್ದಕ್ಕೆ ಆ ತರಹ ಮಾಡಲಿಲ್ಲ ಎಂದು ಹೇಳಿದಿರಿ. ವಾಸ್ತವಿಕವಾಗಿ ಸೆಲೆಕ್ಷನ್ ಸಮಿತಿಯಲ್ಲಿ ವೃತ್ತಿಯಲ್ಲಿ ಬೆಸ್ತರಾಗಿರತಕ್ಕಂಥವರಿಗೆ ಪ್ರಾತಿನಿಧ್ಯ ಕೊಡತಕ್ಕಂಥ ನೀತಿ ಇದೆಯೇ? ಅವರು ಬೆಸ್ತರಲ್ಲ ಎಂದು ಅನೇಕ ಅರ್ಜಿಗಳನ್ನು ನಿರಾಕರಣೆ ಮಾಡಿದ್ದರೆ ಅಂತಹ ಅರ್ಜಿಗಳನ್ನು ಪುರಸ್ಕರಿಸುತ್ತೀರಾ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಇಂಥದ್ದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆ ವಿಧವಾದ ಹೆಚ್ಚುಕಡಿಮೆಗಳು, ಲೋಪದೋಷಗಳಾಗಿವೆ ಎನ್ನುವುದು ಗೊತ್ತಾದರೆ ಆ ರೀತಿ ಮಾಡಬಾರದೆಂದು ಅವರಿಗೆ ಸೂಚನೆ ಕೊಡುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ.—ಮೀನು ಹಿಡಿಯತಕ್ಕ ಜನ ಯಾರಿದ್ದಾರೆ ಅಂಥವರ ಅರ್ಜಿಗಳನ್ನು ತೆಗೆದುಕೊಳ್ಳದೆ ಮೀನುಗಾರರು ಎಂದು ಹೇಳತಕ್ಕ ರೀತಿಯಲ್ಲಿ ಶಿಕ್ಷಣಾರ್ಥಿಗಳಾಗಿ ಮುಂದೆ ಬಂದಿರತಕ್ಕ ನೂರಾರು ಉದಾಹರಣೆಗಳಿವೆ. ಆದ್ದರಿಂದ ಈಗ ಇರುವ ನಿಯಮಗಳನ್ನು ಬದಲಾವಣೆ ಮಾಡಿ ಏನಾದರೂ ಹೊಸದಾಗಿ ಕ್ರಮ ಮಾಡುತ್ತೀರಾ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ನಾಲ್ಕು ಟ್ರೇನಿಂಗ್ ಸೆಂಟರ್‌ಗಳಲ್ಲಿ ಮೊದಲು ನಲವತ್ತು ಜನರಂತೆ ಮಾತ್ರ ತೆಗೆದುಕೊಳ್ಳಲಾಗುತ್ತಿತ್ತು. ಈಗ 50 ಜನರಂತೆ ತೆಗೆದುಕೊಳ್ಳಲಾಗುತ್ತಿದೆ. ಅದಕ್ಕೂ ಮೊದಲೇ ಟ್ರೇನಿಂಗ್ ಪೂರ್ತಿಯಾಗಿ ಶಿಕ್ಷಣವಾಗತಕ್ಕ ಅನೇಕ ಜನ ಅರ್ಜಿಗಳನ್ನು ಹಾಕಿಕೊಳ್ಳುತ್ತಿದ್ದಾರೆ. ಅದಕ್ಕೋಸ್ಕರ ಹೆಚ್ಚುವರಿ ಬೇಕು ಎನ್ನುವವರಿಗೆ ಕೊಡುವುದು ಕಷ್ಟವಾಗಿದೆ.

Sri B. P. KADAM.—Is it not a fact that the Selection Committee has monopolised the selection of candidates only for the benefit of a few fishing communities, to the exclusion of others in the North Canara District ?

Sri H. C. LINGA REDDY.—No that is not true.

Sri B. P. KADAM.—Is it not brought to the notice of the Minister for fisheries ?

Sri H. C. LINGA REDDY.—The matter will be enquired into. I will verify it.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಫಿಷರೀಸ್ ಟ್ರೈನಿಂಗಿಗೆ ತೆಗೆದುಕೊಳ್ಳುವಾಗ ಅವರ ಜಾತಿಯ ಆಧಾರದಮೇಲೆ ತೆಗೆದುಕೊಳ್ಳುತ್ತೀರಾ ಅಥವಾ ನಿಜವಾಗಿ ಫಿಷಿಂಗ್ ಅನುಭವ ಪಡೆದವರನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮುಖ್ಯವಾದ ಕ್ವಾಲಿಫಿಕೇಷನ್ ಏನು ಎಂದರೆ, He should be a fisherman by profession having five years' sea-going experience ಎನ್ನುವುದು ಮೊದಲನೆಯದು, 21 ವರ್ಷದಿಂದ 40 ವರ್ಷದವರೆಗೆ ವಯಸ್ಸಾಗಿರಬೇಕು ಮತ್ತು ಅಕ್ಷರಸ್ಥನಾಗಿರಬೇಕು. ಜಾತಿಯ ವಿಚಾರಗಳೇನೂ ಇಲ್ಲ.

ಶ್ರೀ ಎಂ. ಎಂ. ಜಾಲಿಹಾಳ್.—ಬೆಸ್ತರಲ್ಲದವರನ್ನು ಒಬ್ಬರನ್ನಾದರೂ ತೆಗೆದುಕೊಂಡದ್ದು ನಿಮ್ಮ ನಜರಿನಲ್ಲಿದೆಯೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮಾನ್ಯ ಸದಸ್ಯರು ಜನರಲ್ ಆಗಿ ಪ್ರಶ್ನೆ ಹಾಕಿದ್ದಾರೆ. ಬೆಸ್ತರಲ್ಲದವರಿಗೆ ಶಿಕ್ಷಣಾರ್ಥಿಗಳನ್ನಾಗಿ ತೆಗೆದುಕೊಳ್ಳಬಾರದೆಂದು ತಿಳಿಸಿಲ್ಲ. ಶಿಕ್ಷಣಾರ್ಥಿಗಳನ್ನು ಆರಿಸಲು ಒಂದು ಸಮಿತಿ ಇದೆ. ಅದರಲ್ಲಿ ಡೆಪ್ಯುಟಿ ಡೈರೆಕ್ಟರ್ ಆಫ್ ಫಿಷರೀಸ್, ಸೂಪರಿಂಟೆಂಡೆಂಟ್ ಆಫ್ ಫಿಷರೀಸ್, ಹಾಗೂ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಪಿಷರೀಸ್ ಮತ್ತು ಜೇರ್‌ಮನ್ ಆಫ್ ಮಾರ್ಕೆಟಿಂಗ್ ಕೋ ಆಪರೇಟಿವ್ ಯೂನಿಯನ್, ಕಾರವಾರ; ಇಷ್ಟು ಜನ ಸೇರಿ ಇಂಟರ್‌ವ್ಯೂ ಕರೆದು ಸೆಲೆಕ್ಟ್ ಮಾಡುತ್ತಾರೆ. ಏನಾದರೂ ಹೆಚ್ಚು ಕಡಿಮೆಯಾಗಿದ್ದರೆ ಅದನ್ನು ಸರಿಪಡಿಸಬಹುದು.

ಶ್ರೀ ಎ. ಮುನಿಯಪ್ಪ.—ಹೆಚ್ಚು ಕಡಮೆಯಾಗಿದ್ದರೆ ಸರಿಮಾಡಬಹುದು ಎಂದು ಹೇಳಿದ್ದಾರೆ. ಸೆಲಕ್ಷನ್‌ನಲ್ಲಿ ಅನ್ಯಾಯವಾಗಿದ್ದರೆ ಅದನ್ನೂ ಸರಿಪಡಿಸುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅನ್ಯಾಯವಾಗಿದೆ ಎನ್ನುವುದು ಗೊತ್ತಿಲ್ಲ. ಗೊತ್ತಾದರೆ ಸರಿಪಡಿಸಬಹುದು.

Sri B. P. KADAM.—Is it not a fact that the Selection Committee has monopolised the selection for the benefit of a few fishing communities only ? Was that fact not brought to the notice of the Hon. Minister by a letter signed by all the M.L.As. of North Kanara District ?

Sri H. C. LINGA REDDY.—I do not remember. I will just verify.

Sri B. P. KADAM.—It was given in September.

Sri H. C. LINGA REDDY.—That was not about this.

Mr. SPEAKER.—Question No. 937. Hon. Member Sri A.R. Panchagavi is absent. The Question Hour is over.